27/8/2018.

<u>ಪ್ರಕಟಣೆಗಾಗಿ</u>

2017-18ನೇ ಸಾಲಿನಲ್ಲಿ ರಾಜ್ಯದಲ್ಲಿನ ಒಟ್ಟು 10,000 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಖಾಲಿ ಹುದ್ದೆಗಳಿಗೆ (ಹೈದರಾಬಾದ್-ಕರ್ನಾಟಕ, ಇತರೆ, ಬಿ.ಬಿ.ಎಂ.ಪಿ.) ನೇಮಕಾತಿ ಮಾಡಿಕೊಳ್ಳುವ ಸಲುವಾಗಿ ರಾಜ್ಯದ 31 ಶೈಕ್ಷಣಿಕ ಜಿಲ್ಲೆಗಳಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 321 ಪಿಬಿಎಸ್ 2017, ದಿನಾಂಕ: 22-08-2017ರಂತೆ ದಿನಾಂಕ: 11-11-2017 ಮತ್ತು 12-11-2017, 18-11-2017 ಮತ್ತು 19-11-2017, 25-11-2017 ಮತ್ತು 26-11-2017, 09-12-2017 ಮತ್ತು 10-12-2017 ರಂದು 4 ಹಂತಗಳಲ್ಲಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಯಿತು. ಈ ಪರೀಕ್ಷೆಗೆ ಹೈದರಾಬಾದ್-ಕರ್ನಾಟಕದ 24318 ಅಭ್ಯರ್ಥಿಗಳು ಹಾಗೂ ಇತರೆ ಜಿಲ್ಲೆಗಳ 31143 ಅಭ್ಯರ್ಥಿಗಳು ಒಟ್ಟು 55461 ಅಭ್ಯರ್ಥಿಗಳು ಪರೀಕ್ಷೆ ಬರೆದಿರುತ್ತಾರೆ.

ಆಯ್ಕೆ ಪರೀಕ್ಷೆಯನ್ನು ನಾಲ್ಕು ಹಂತಗಳಲ್ಲಿ ನಡೆಸಲಾಗಿದೆ. ಪರೀಕ್ಷಾ ಪ್ರಶ್ನೆ ಪತ್ರಿಕೆಯು ವಿವರಣಾತ್ಮಕ ಹಾಗೂ ಬಹುಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿದೆ. ಸರ್ಕಾರದ ಆದೇಶದಂತೆ ಅರ್ಹತಾ ಮಾನದಂಡವನ್ನು ಪತ್ರಿಕೆ-2ರಲ್ಲಿ ಶೇಕಡ 50 ಹಾಗೂ ಪತ್ರಿಕೆ-3 ಶೇಕಡ 60 ಕ್ಕೆ ಸೀಮಿತಗೊಳಿಸಿದೆ. ಸದರಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯ ಮಾಪನವನ್ನು ತಂತ್ರಾಂಶದ ಸಹಾಯದಿಂದ ಗಣಕೀಕೃತ ಮೌಲ್ಯಮಾಪನ (Digital evaluation) ಮಾಡಿದ್ದು, ವಿವರಣಾತ್ಮಕ ಉತ್ತರ ಪತ್ರಿಕೆಗಳನ್ನು ಇಬ್ಬರು ವಿಷಯ ಪರಿಣಿತ ಮೌಲ್ಯಮಾಪನ ಮಾಡಿಸಿದೆ. ಇಬ್ಬರು ಮೌಲ್ಯಮಾಪಕರು ನೀಡಲಾದ ಅಂಕಗಳಲ್ಲಿ 15 ಹಾಗೂ ಹೆಚ್ಚು ಅಂಕಗಳ ವ್ಯತ್ಯಾಸವಿದ್ದಲ್ಲಿ ಮೂರನೇ ಮೌಲ್ಯಮಾಪನಕ್ಕೆ ಒಳಪಡಿಸಿದೆ.

1:2 ಅನುಪಾತದ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ದಿನಾಂಕ: 20-06-2018 ಹಾಗೂ 23-06-2018ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಯಿತು. ಪ್ರಕಟಿಸಲಾದ 1:2 ಅನುಪಾತದ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಕೆಲವೊಂದು ದೋಷಗಳು ಕಂಡುಬಂದಿದ್ದು, ಹಲವಾರು ಅಭ್ಯರ್ಥಿಗಳಿಂದ ಕೇಂದ್ರೀಕೃತ ದಾಖಲಾತಿ ಘಟಕಕ್ಕೆ ಆನ್‌ಲೈನ್ ಮೂಲಕ ಹಾಗೂ ಮುದ್ದಾಂ ಆಕ್ಷೇಪಣೆಗಳ ಸಲ್ಲಿಕೆಯಾಗಿರುತ್ತದೆ.

ಸ್ವೀಕರಿಸಲಾದ ಆಕ್ಷೇಪಣೆಗಳಲ್ಲಿ ಹೆಚ್ಚಿನವು, ಗರಿಷ್ಠ ಹಾಗೂ ಪಡೆದ ಅಂಕಗಳನ್ನು ತಪ್ಪಾಗಿ ನಮೂದಿಸಿದ್ದ, ಅಂಕಗಳ ಬದಲಾಗಿ ಗ್ರೇಡ್‌ನ್ನು (Grade), ನೋಂದಣಿ ಸಂಖ್ಯೆಯನ್ನು ತಪ್ಪಾಗಿ ಬರೆದಿದ್ದ ಇತ್ಯಾದಿ ಒಳಗೊಂಡಿರುತ್ತದೆ. ಈ ರೀತಿಯ ಆಕ್ಷೇಪಣೆಗಳ ಪ್ರಕರಣಗಳ ಫಲಿತಾಂಶ ತಡೆಯಿಡಿಯಲಾಗಿತ್ತು. ನಂತರ ಈ ಬಗ್ಗೆ ಹಲವಾರು ಹಂತಗಳಲ್ಲಿ ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ (Cross Verification) ದೋಷಗಳನ್ನು ಸರಿಪಡಿಸಲಾಯಿತು.

ಈ ಹಿನ್ನೆಲೆಯಲ್ಲಿ ದಿನಾಂಕ: 20-06-2018 ಹಾಗೂ 23-06-2018ರಂದು ಪ್ರಕಟಗೊಂಡಿದ್ದ 1:2 ಅನುಪಾತದ ತಾತ್ಕಾಲಿಕ ಪರಿಶೀಲನಾ ಪಟ್ಟಿಗಳನ್ನು ಇಲಾಖೆ ಹಿಂಪಡೆದುಕೊಂಡಿರುತ್ತದೆ. ವಿವರವಾದ ಪರಿಶೀಲನೆಯೊಂದಿಗೆ ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಇಡಿ 321 ಪಿಬಿಎಸ್ 2018 ಬೆಂಗಳೂರು ದಿನಾಂಕ: 23-08-2018ರಂತೆ ಸರ್ಕಾರಿ ಪ್ರಾಥಮಿಕ ಶಾಲೆಗಳ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (6 ರಿಂದ 8 ನೇ ತರಗತಿ-ಗಣಿತವಿಜ್ಞಾನ, ಭಾಷೆ ಮತ್ತು ಸಮಾಜ ವಿಜ್ಞಾನ) ವೃಂದಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 399 ಪಿಬಿಎಸ್ 2017 ದಿನಾಂಕ: 22-08-2017ರ ಅಧಿಸೂಚನೆಯಂತೆ ಪತ್ರಿಕೆ-2ರಲ್ಲಿ ಶೇಕಡ 50 ಹಾಗೂ ಪತ್ರಿಕೆ-3 ರಲ್ಲಿ ಶೇಕಡ 60 ಸೀಮಿತಗೊಳಿಸಿ ಅರ್ಹತಾ ಮಾನದಂಡವನ್ನು ಯಥಾವತ್ತಾಗಿ ಪರಿಗಣಿಸಿ 1:3 ಅನುಪಾತದ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಿದೆ.

ಅರ್ಹತಾ ಪಟ್ಟಿಯಲ್ಲಿ ಒಬ್ಬರೇ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ಜಿಲ್ಲೆಗಳಿಗೆ ಆಯ್ಕೆಯಾಗುವ ಸಾಧ್ಯತೆ ಇರುವುದರಿಂದ, 1:2 ಅನುಪಾತದ ಬದಲಾಗಿ 1:3 ಅನುಪಾತದಲ್ಲಿ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ **www.schooleducation.kar.nic.in** ಪ್ರಕಟಿಸಲಾಗಿದೆ.

1:3 ಅನುಪಾತದ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನಾ ಕಾರ್ಯವು ಸಂಬಂಧಿತ ಜಿಲ್ಲೆಯ ಉಪನಿರ್ದೇಶಕರು (ಆಡಳಿತ)ರವರ ಹಂತದಲ್ಲಿ ನಡೆಯಲಿದ್ದು, ಈ ಬಗ್ಗೆ ಸೂಚನೆಯನ್ನು ಪ್ರತ್ಯೇಕವಾಗಿ ನೀಡಲಾಗುವುದು. ಈ ಪ್ರಕ್ರಿಯೆಯ ನಂತರ 1:1 ಅನುಪಾತದ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗುವುದು.

ಆಯುಕ್ತರು, 27/8/2018
ಸಾರ್ವಜನಿಕ ಶಿಕ್ಷಣ ಇಲಾಖೆ